ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

ಶ್ರೀ ಜಗದೀಶ್ ಶಿವಪ್ಪ ಶೆಟ್ಟರ್ -ವಿರುದ್ಧ-ಶ್ರೀ ಎ. ಪ್ರಸಾದ್*

ಕ್ರಿಮಿನಲ್ ಅರ್ಜಿಸಂಖ್ಯೆ: 6731/2014 ಇದರೊಂದಿಗೆ ಇತರೆ, ದಿನಾಂಕ 19 ನೇ ಫೆಬ್ರುವರಿ, 2019.

ಆದೇಶ

ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್:

ಬೆಂಗಳೂರು ಮಹಾನಗರ ಕಾರ್ಯಪಡೆ (ಸಂಕ್ಷಿಪ್ತವಾಗಿ ' ಬಿಎಂಟಿಎಫ್) ಪೊಲೀಸ್ ಠಾಣೆಯು ದಾಖಲಿಸಿದ ಪ್ರಥಮ ಮಾಹಿತಿ ವರದಿ ಸಂ .63/2014 ಅನ್ನು ಪ್ರಶ್ನಿಸಿ 1 ನೇ ಮತ್ತು 2 ನೇ ಆರೋಪಿಗಳು ಈ ಎರಡು ಅಪರಾಧಿಕ ಅರ್ಜಿಗಳನ್ನು ದಾಖಲಿಸಿರುತ್ತಾರೆ.ಈ ಅರ್ಜಿಗಳು ಕಾನೂನಿನ ಸಾಮಾನ್ಯ ಸಂಗತಿಗಳನ್ನು ಹಾಗೂ ಪ್ರಶ್ನೆಗಳನ್ನು ಒಳಗೊಂಡಿದ್ದರಿಂದ, ಅವುಗಳನ್ನು ಈ ಸಾಮಾನ್ಯ ಆದೇಶದ ಮೂಲಕ ವಿಲೆ ಮಾಡಲಾಗಿದೆ.

2. ಉಭಯ ಅರ್ಜಿದಾರರ ಪರವಾಗಿ ಮಾನ್ಯ ಹಿರಿಯ ನ್ಯಾಯವಾದಿಗಳಾದ ಶ್ರೀ ಸಿ.ವಿ. ನಾಗೇಶ್ ಮತ್ತು ಸರ್ಕಾರದ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯದ ಚ ಸರ್ಕಾರಿ ಪ್ರಾಸಿಕ್ಯೂಟರ್ ಆಗಿರುವ ಶ್ರೀಮತಿ ನಮಿತ ಮಹೇಶ್ ಬಿ.ಜಿ. ಇವರುಗಳ ವಾದಗಳನ್ನು ಆಲಿಸಲಾಗಿದೆ.ದೂರುದಾರ -1 ನೇ ಪ್ರತ್ಯರ್ಜಿದಾರ ಪರವಾಗಿ ಯಾರು ಹಾಜರಾಗಿರುವುದಿಲ್ಲ.

3. ಮಾನ್ಯ ಹಿರಿಯ ನ್ಯಾಯವಾದಿಗಳಾದ ಶ್ರೀ ಸಿ.ವಿ. ನಾಗೇಶ್ ಅವರು ಮಾಡಿದ ನಿವೇದನೆಗಳು ಈ ಮುಂದಿನಂತಿದೆ:

* ರಾಜ್ಯ ಸರ್ಕಾರವು, ಅಧಿಸೂಚನೆ ಸಂ. ಆರ್ಡಿ 431 ಎಲ್ಬಿಡಿ 66,ದಿನಾಂಕ: 16.03.1967 ರ ಮೂಲಕ ಹದಿಮೂರು ಫಲಾನುಭವಿಗಳ ಪರವಾಗಿ ಬೆಂಗಳೂರು ದಕ್ಷಿಣ ತಾಲ್ಲೂಕು, ಸಾದರ ಮಂಗಲ ಗ್ರಾಮದಲ್ಲಿನ ಸರ್ವೆ ಸಂ .76 ರಲ್ಲಿ ಜಮೀನಿನ ಕೆಲವು ಜಾಗಗಳನ್ನು ಮಂಜೂರು ಮಾಡಿದೆ.

ಫಲಾನುಭವಿಗಳಲ್ಲಿ ಒಬ್ಬರಾಗಿರುವ ಶ್ರೀ ಸೂರ್ಯನಾರಾಯಣ ರಾವ್ ಅವರು ಒಬ್ಬ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಅವರಿಗೆ 4 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿರುತ್ತದೆ.ಆದರೆ ಅವರ ಸ್ವಾಧೀನಕ್ಕೆ ಜಮೀನನ್ನು ನೀಡಿರುವುದಿಲ್ಲ.ಇವರ ಕಾನೂನು ಸಮ್ಮತ ವಾರಸುದಾರರು ರಿ.ಅ.ಸಂ .3664/1983 ಅನ್ನು ದಾಖಲಿಸಿರುತ್ತಾರೆ.ಈ ನ್ಯಾಯಾಲಯವು,ದಿನಾಂಕ: 18.06.1990 ರಂದು ನೀಡಿದ ಆದೇಶದಲ್ಲಿ, ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಿರುತ್ತದೆ ಮತ್ತು ಅರ್ಜಿದಾರರ ಕೋರಿಕೆಯನ್ನು ಪರಿಗಣಿಸಿ, ಆದೇಶದ ದಿನಾಂಕದಿಂದ ಮೂರು ತಿಂಗಳೊಳಗಾಗಿ 4 ಎಕರೆ ಜಮೀನನ್ನು ಮಂಜೂರು ಮಾಡುವಂತೆ ಇದರಲ್ಲಿನ ಪ್ರತ್ಯರ್ಜಿದಾರರಿಗೆ ನಿರ್ದೇಶಿಸಿರುತ್ತದೆ ಮತ್ತು ಮುಂದುವರೆದು, ಕಾನೂನು ಸಮ್ಮತ ವಾರಸುದಾರರ ಹೆಸರಿನಲ್ಲಿ ಸಾಗುವಳಿ ಚೀಟಿಯನ್ನು ನೀಡುವಂತೆ ಪ್ರತ್ಯರ್ಜಿದಾರರಿಗೆ ನಿರ್ದೇಶಿಸಿರುತ್ತದೆ.ಹಾಗಿದ್ದಾಗ್ಯೂ, ಸದರಿ ಆದೇಶವು ಅನುಪಾಲನೆಯಾಗಿರುವುದಿಲ್ಲ;

* ದಿ. ಶ್ರೀ ಸೂರ್ಯನಾರಾಯಣ ರಾವ್ ಅವರ ವಾರಸುದಾರರಲ್ಲಿ ಒಬ್ಬರಾದ ಶ್ರೀ ಎಸ್. ಸುಂದರೇಶ ಅವರು ಮತ್ತೊಂದು ರಿಟ್ ಅರ್ಜಿಯಾದ ರಿ.ಅ.ಸಂ .17665/2006 ನ್ನು ದಾಖಲಿಸಿರುತ್ತಾರೆ.ಈ ನ್ಯಾಯಾಲಯವುದಿನಾಂಕ:

11.01.2007 ರ ಆದೇಶದ ಮೂಲಕ 1 ನೇ ಪ್ರತ್ಯರ್ಜಿದಾರರಿಗೆ ಅಂದಿನಿಂದ ಮುಂದಿನ ಎಂಟು ವಾರಗಳೊಳಗೆ ರಿ.ಅ.ಸಂ .3664/2018 ರಲ್ಲಿ ಈ ನ್ಯಾಯಾಲಯ ಹೊರಡಿಸಿದ ನಿರ್ದೇಶನಗಳನ್ನು ಅನುಪಾಲನೆ ಮಾಡಬೇಕೆಂದು ನಿರ್ದೇಶಿಸುತ್ತದೆ;

* ಈ ನಡುವೆ, ಸದರಿ ಜಮೀನು ಕೆಐಎಡಿಬಿ ಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಮತ್ತು ಸದರಿ ಶ್ರೀ ಸುಂದರೇಶ ಪ್ರಶ್ನಿತ ಜಮೀನಿನ ಸ್ವಾಧೀನತೆ ಪ್ರಕ್ರಿಯೆಯನ್ನು ಹಿಂಪಡೆಯುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಮತ್ತೊಂದು ರಿಟ್ ಅರ್ಜಿ ಸಂ .5888/2010 ಅನ್ನು ದಾಖಲಿಸಿರುತ್ತಾರೆ.ಸದರಿ ರಿಟ್ ಅರ್ಜಿಯೂ ವಜಾಗೊಂಡಿರುತ್ತದೆ.ಇದರಿಂದ ಬಾಧಿತರಾದ ಶ್ರೀ ಸುಂದರೇಶ ಅವರು ರಿಟ್ ಅರ್ಜಿ ಸಂ .3038/2010 ಅನ್ನು ದಾಖಲಿಸಿದರು.ಈ ನ್ಯಾಯಾಲಯವು, ದಿನಾಂಕ 06.08.2010 ರ ಆದೇಶದ ಮೂಲಕ, ಯಾವುದೇ ಇತರ ಪರ್ಯಾಯ ಜಮೀನನ್ನು ಮಂಜೂರು ಮಾಡುವ ಸಂಬಂಧದಲ್ಲಿ ರಾಜ್ಯ ಸರ್ಕಾರವನ್ನು ಕೋರುವಂತೆ ಬಾಧಿತನಿಗೆ ಅನುಮತಿ ನೀಡಿತು.ರಾಜ್ಯ ಸರ್ಕಾರಕ್ಕೆ ಮನವಿಯನ್ನು ಪರಿಗಣಿಸುವುದಕ್ಕೆ ಹಾಗೂ ಮೂರು ತಿಂಗಳೊಳಗಾಗಿ ಕಾನೂನಿಗೆ ಅನುಸಾರವಾಗಿ ಯಾವುದಾದರೂ ಮನವಿಗಳು ಬಂದಿದ್ದರೆ, ಅವುಗಳನ್ನು ಪರಿಗಣಿಸಬೇಕೆಂದು ನಿರ್ದೇಶಿಸಿತು.ಸದರಿ ಆದೇಶವು ಸಹ ಅನುಪಾಲನೆಯಾಗಲಿಲ್ಲ.

* ಅಪೀಲುದಾರರು ಈ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನೆಯ ಅರ್ಜಿ ಸಿ.ಸಿ.ಸಿ.ಸಂ .605/2012 ಯನ್ನು ಹೂಡಿರುವರು.ಈ ನ್ಯಾಯಾಲಯವು, ಸದರಿ ನ್ಯಾಯಾಂಗ ನಿಂದನೆ ಅರ್ಜಿಯನ್ನು ಈ ಮು ಂ ದಿನ ಆದೇಶದೊಂದಿಗೆ ವಿಲೇ ಮಾಡಿದೆ:

ಸರ್ಕಾರಿ CC ವಕೀಲರು ದಿನಾಂಕ 05.09.2012 ಆದೇಶದೊಂದಿಗೆ ಒಂದು ಮೆಮೊವನ್ನು ಸಲ್ಲಿಸಿದ್ದಾರೆ.ಅದರಲ್ಲಿ, ಸರ್ಕಾರವು ಪರಾಯ ಜಮೀನನ್ನು ಒದಗಿಸುವ ಮೂಲಕ ದೂರುದಾರನ ಮನವಿಯನ್ನು ಪರಿಗಣಿಸುತ್ತದೆ, ಮತ್ತು ದೂರುದಾರನು ಯಾವುದೇ ನಿರ್ದಿಷ್ಟ ಜಮೀನನ್ನು ನೀಡಬೇಕೆಂದು ಒತ್ತಾಯಿಸತಕ್ಕದ್ದಲ್ಲ ಎಂದು ಮೆಮೋದಲ್ಲಿ ನಿವೇದಿಸಲಾಗಿರುತ್ತದೆ.ಈ ನಿವೇದನೆಯನ್ನು ದೃಷ್ಟಿಯಲ್ಲಿಟ್ಟು ಕೊಂಡು, ಅರ್ಜಿಯನ್ನು ಮುಕ್ತಾಯಗೊಳಿಸಲಾಗಿದೆ.ದೂರುದಾರನು ಸರ್ಕಾರಕ್ಕೆ ಹೊಸದಾಗಿ ಮನವಿಯನ್ನು ಸಲ್ಲಿಸುವುದಕ್ಕೆ ಸ್ವತಂತ್ರ ಹೊಂದಿರುತ್ತಾನೆ."

* ಈ ವಸ್ತು ವಿಷಯವನ್ನು ಸಚಿವ ಸಂಪುಟವು ಪರಿಗಣಿಸಿ, ಈ ಸಂಬಂಧದಲ್ಲಿ ಬೆಂಗಳೂರು ಉತ್ತರ ತಾಲೂಕಿನ, ಯಶವಂತಪುರ ಹೋಬಳಿಯ ಶ್ರೀಗಂಧ ಕಾವಲು ಇಲ್ಲಿ ಸರ್ವೆ ಸಂ .129 (ಹಳೆಯ ಸರ್ವೆ ಸಂಖ್ಯೆ 51) ರಲ್ಲಿ 4 ಎಕರೆ ಜಮೀನನ್ನು ಹಂಚಿಕೆ ಮಾಡುವುದಕ್ಕೆ ನಿರ್ಣಯವನ್ನು ತೆಗೆದುಕೊಂಡಿತು.ತದನುಸಾರವಾಗಿ, ಆದೇಶ ಸಂ, ಕಂದಾಯ ಇಲಾಖೆ 363 ಎಲ್ಜಿಎಕ್ಸ್ 2012,ದಿನಾಂಕ: 22.04.2013 ರ ಮೂಲಕ ರಾಜ್ಯ ಸರ್ಕಾರವು ಸದರಿ ಸರ್ವೆ ನಂಬರಿನಲ್ಲಿರುವ 4 ಎಕರೆ ಜಮೀನನ್ನು ದೂರುದಾರನಿಗೆ ಮಂಜೂರು ಮಾಡಿತು.

* ತದನಂತರದಲ್ಲಿ, ಮೊದಲ ಪ್ರತ್ಯರ್ಜಿದಾರನುದಿನಾಂಕ: 31.07.2014 ರಂದು ಬೆಂಗಳೂರು ಮಹಾನಗರ ಕಾರ್ಯಪಡೆ ಪೊಲೀಸ್ ಠಾಣೆಯಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ 192 ( ಎ) ಮತ್ತು 192 (ಬಿ) ಪ್ರಕರಣಗಳ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆಯ 34 ನೇ ಪ್ರಕರಣವನ್ನು ಒದಿಕೊಳ್ಳುವುದರೊಂದಿಗೆ 218, 166, 420 ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಲಾಗಿದೆ ಎಂದು ಆರೋಪಿಸಿ ದೂರನ್ನು ದಾಖಲಿಸಿದರು.ತದನುಸಾರವಾಗಿ, ಜಮೀನು

ಮಂಜೂರುಧಾರಕರಾದ ರಾಜ್ಯದ ಮಾಜಿ ಮುಖ್ಯಮಂತ್ರಿಗಳ ವಿರುದ್ಧ ಮತ್ತು ಕೆಲವು ಇತರ ಸರ್ಕಾರಿ ಅಧಿಕಾರಿಗಳ ವಿರುದ್ಧ ಪ್ರ.ಮಾ.ವ ಸಂ .63/2014 ಅನ್ನು ದಾಖಲಿಸಲಾಯಿತು.ಆದುದರಿಂದ ಈ ಅರ್ಜಿಗಳನ್ನು ಸಲ್ಲಿಸಲಾಗಿದೆ.

4. ಪ್ರಥಮ ಮಾಹಿತಿ ವರದಿಯನ್ನು ವಿರೋಧಿಸಿ, ಶ್ರೀ ಸಿ.ವಿ. ನಾಗೇಶ್ ಅವರು, ಈ ನ್ಯಾಯಾಲಯವು ಕಾಲಕಾಲಕ್ಕೆ ಹೊರಡಿಸಿದ ವೈವಿಧ್ಯಮಯ ತೀರ್ಪುಗಳ ಇತಿಹಾಸ ಮತ್ತು ನಿರ್ದೇಶನಗಳನ್ನು ಗಮನಕ್ಕೆ ತಂದುಕೊಂಡು, ಸಚಿವ ಸಂಪುಟವು ಹಂಚಿಕೆದಾರರಿಗೆ ಜಮೀನನ್ನು ಮಂಜೂರು ಮಾಡುವುದಕ್ಕೆ ನಿರ್ಣಯಿಸಿತ್ತು ಎಂದು ವಾದಿಸಿದರು.ಸಚಿವ ಸಂಪುಟದ ಸದರಿ ನಿರ್ಣಯವು ಮೇಲೆ ಉಲ್ಲೇಖಿಸಿದ ಸರ್ಕಾರಿ ಆದೇಶದ ರೂಪದಲ್ಲಿದೆ.ಆದುದರಿಂದ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (ಸಂಕ್ಷಿಪ್ತವಾಗಿ ಕ.ಭೂ.ಕಂ. ಅಧಿನಿಯಮ) ರ 192 ( ಎ) ಪ್ರಕರಣದ ಅಡಿಯಲ್ಲಿ ಅಪರಾಧ ಎಸಗಿರುವರೆಂದು ಆರೋಪಿಸಿರುವ ದೂರಿನಲ್ಲಿ 192 ( ಎ) ಪ್ರಕರಣದ ಯಾವುದೇ ಅಂಶಗಳು ಇಲ್ಲದಿದ್ದರಿಂದ, ಕಾನೂನಿನ ಸಂಪೂರ್ಣ ದುರ್ಬಳಕೆಯಾಗಿರುತ್ತದೆ ಎಂದು ವಾದಿಸಿದ್ದಾರೆ.ಮುಂದುವರೆದು, ಈ ಮೊಕದ್ದಮೆಯ ವಾಸ್ತವಾಂಶ ಸಂಗತಿಗಳಿಗೆ 192 (ಬಿ) ಪ್ರಕರಣದ ಉಪಬಂಧಗಳು ಮತ್ತು ಐಪಿಸಿಯ ಇತರ ಉಪಬಂಧಗಳು ಸಹ ಅನ್ವಯವಾಗುವುದಿಲ್ಲ ಎಂದು ನಿವೇದಿಸಿರುವರು.

5. ನ್ಯಾಯವಾದಿಗಳು ತಮ್ಮ ವಾದವನ್ನು ಮುಂದುವರೆಸಿ,ದಿನಾಂಕ: 12.09.2012 ರ ಸರ್ಕಾರಿ ಆದೇಶದ ಮೂಲಕ ಸ್ಥಾಪಿಸಲಾಗಿದ್ದ ಬಿಎಂಟಿಎಫ್ನ ಅವಧಿಯುದಿನಾಂಕ: 18.03.2013 ರಂದು ಕೊನೆಗೊಂಡಿದ್ದರಿಂದ ಮತ್ತು ತದನಂತರ ಅದನ್ನು ವಿಸ್ತರಿಸದಿದ್ದುದರಿಂದ ದೂರನ್ನು ದಾಖಲಿಸಿಕೊಳ್ಳುವುದಕ್ಕೆ ಬೆಂಗಳೂರು ಮಹಾನಗರ ಕಾರ್ಯಪಡೆಯ ಪೊಲೀಸ್ ಠಾಣೆಗೆ ಯಾವುದೇ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಎಂದು ವಾದಿಸಿದ್ದಾರೆ.ಈ ವಾದಾಂಶಕ್ಕೆ ಪೂರಕವಾಗಿ, ಈ ನ್ಯಾಯಾಲಯದ ದಿನಾಂಕ 26.09.2018 ರಲ್ಲಿ ರಿಟ್ ಅರ್ಜಿ ಸಂ. 26160/2013 ಮತ್ತು ಸಂಬಂಧಿಸಿದ ಅರ್ಜಿಗಳ ನಿರ್ಣಯವನ್ನು ಅವಲಂಬನೆಯಾಗಿ ಮಂಡಿಸಿರುವರು.

6. ಈ ಅರ್ಜಿಗಳನ್ನು ವಿರೋಧಿಸಿ ಸರ್ಕಾರದ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ರಾಸಿಕ್ಯೂಟರ್ ಆಗಿರುವ ಶ್ರೀಮತಿ ನಮಿತ ಮಹೇಶ್ ಬಿ.ಜಿ ಯವರು ಬಿಎಂಟಿಎಫ್ ಅವಧಿಯನ್ನು ದಿನಾಂಕ 06.02.2013 ರ ಅಧಿಸೂಚನೆಯ ಮೂಲಕ ವಿಸ್ತರಿಸಲಾಗಿದೆ ಮತ್ತು ಬೆಂಗಳೂರು ಮಹಾನಗರ ಕಾರ್ಯಪಡೆ ಪೊಲೀಸರು ಭಾರತ ದಂಡ ಸಂಹಿತೆಯ ಅಡಿಯಲ್ಲಿನ ದೂರನ್ನು ಪುರಸ್ಕರಿಸಬಹುದೆ?ಎಂಬ ವಿಷಯವು ಸರ್ವೋಚ್ಚ ನ್ಯಾಯಾಲಯದ ಮುಂದೆ ಪರಿಗಣನೆಗಾಗಿ ಬಾಕಿ ಇದೆ ಎಂದು ವಾದಿಸಿದ್ದಾರೆ.

7. ನಾನು, ಉಭಯ ಪಕ್ಷಕಾರರ ನಿವೇದನೆಗಳನ್ನು ಮತ್ತು ಅಭಿಲೇಖಗಳನ್ನು ತುಂಬಾ ಜಾಗರೂಕತೆಯಿಂದ ಪರಿಶೀಲಿಸಿರುತ್ತೇನೆ.

8. ಈ ನ್ಯಾಯಾಲಯವು, ರಿಟ್ ಅರ್ಜಿ ಸಂ. 26160/2013 ರಲ್ಲಿ ಮತ್ತು ಸಂಬಂಧಿಸಿದ ಮೊಕದ್ದಮೆಗಳಲ್ಲಿ ದಿನಾಂಕ 12 ನೇ ಸೆಪ್ಟೆಂಬರ್, 2012 ರ ಆದೇಶಗಳ ಮೂಲಕ ಈ ವಿಷಯವನ್ನು ವ್ಯಾಪಕವಾಗಿ ಪರಿಗಣನೆಗೆ ತೆಗೆದುಕೊಂಡು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

"12. ಮಾನ್ಯ ಹಿರಿಯ ನ್ಯಾಯವಾದಿಗಳು, ಮೊಕದ್ದಮೆಯನ್ನುದಿನಾಂಕ: 18.04.2013 ರಲ್ಲಿ ದಾಖಲಿಸಲಾಗಿದೆ.ಆದರೆ, ಸರ್ಕಾರಿ ಆದೇಶ ಸಂ. ಎನ್.ಎ.ಇ .366 ಎಂಎನ್ಯು 2011 ಬೆಂಗಳೂರು,ದಿನಾಂಕ:

12.09.2012 ರ ಮೇರೆಗೆ ಬೆಂಗಳೂರು ಮಹಾನಗರ ಕಾರ್ಯಪಡೆ ರಚನೆ ಮತ್ತು ಅದರ ಅಧಿಕಾರಾವಧಿಯುದಿನಾಂಕ: 07.12.2011 ರಿಂದ 18.03.2013 ಆಗಿತ್ತು.

ಸದರಿ ಆದೇಶದ ಅಡಿಯಲ್ಲಿ ಬೆಂಗಳೂರು ಮಹಾನಗರ ಕಾರ್ಯಪಡೆಯೊಂದಿಗೆ ಕಾರ್ಯ ನಿರ್ವಹಿಸಲು ಒಂಭತ್ತು ಅಧಿಕಾರಿಗಳನ್ನು ಅಧಿಕೃತಗೊಳಿಸಲಾಯಿತು ಎಂದು ವಾದಿಸಿದ್ದಾರೆ.ಮುಂದುವರೆಸುತ್ತಾ, ಅವರಿಗೆ ನೀಡಿದ ಅಧಿಕಾರವು 18.03.2013 ಕ್ಕೆ ಮುಕ್ತಾಯವಾಗಿರುತ್ತವೆ ಮತ್ತು ತದನಂತರದಲ್ಲಿ ಸದರಿ ಪೊಲೀಸ್ ಮತ್ತು ಪೊಲೀಸ್ ಠಾಣೆಗೆ ನೀಡಿದ ಅಧಿಕಾರವನ್ನು ಅಥವಾ ಅಧಿಕೃತತೆಯನ್ನು ವಿಸ್ತರಣೆ ಮಾಡಿರುವುದಿಲ್ಲ.ಇಂತಹ ಸನ್ನಿವೇಶದಲ್ಲಿ, ಕಾರ್ಯಪಡೆಯನ್ನು " ಸಾಮಾನ್ಯ ಪೊಲೀಸ್ ಠಾಣೆ " ಎಂದು ಕರೆಯಲು ಸಾಧ್ಯವಿಲ್ಲ ಮತ್ತು ಅದು ಭಾರತ ದಂಡ ಸಂಹಿತೆಯ ಅಡಿಯಲ್ಲಿ ಆಗಲೀ ಅಥವಾ ವಿಶೇಷ ಅಧಿನಿಯಮಗಳ ಅಡಿಯಲ್ಲಿ ಆಗಲೀ ಮೊಕದ್ದಮೆಯನ್ನು ದಾಖಲಿಸುವ ಯಾವುದೇ ಅಧಿಕಾರವನ್ನು ಹೊಂದಿರುವುದಿಲ್ಲ ಎಂದು ವಾದಿಸಿದ್ದಾರೆ.ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿದಿನಾಂಕ: 18.03.2013 ನಂತರದಲ್ಲಿ ಬೆಂಗಳೂರು ಮಹಾನಗರ ಕಾರ್ಯಪಡೆಯ ಅಧಿಕಾರವನ್ನು ವಿಸ್ತರಣೆ ಮಾಡುವ ಸಂಬಂಧದಲ್ಲಿ ಮಾಹಿತಿಯನ್ನು ಕೋರಲಾಗಿತ್ತು ಎಂದು, ಮತ್ತು ಅದಕ್ಕೆದಿನಾಂಕ: 18.03.2013 ರ ನಂತರದಲ್ಲಿ ಬೆಂಗಳೂರು ಮಹಾನಗರ ಕಾರ್ಯಪಡೆಯ ಅಧಿಕಾರವು ವಿಸ್ತರಣೆಗೊಂಡಿರುವ ಸ ಂ ಬ ಂ ಧದಲ್ಲಿ ಯಾವುದೇ ಆದೇಶ/ಅಧಿ ಸೂಚನೆಯ ಲಭ್ಯವಾಗಿರುವುದಿಲ್ಲ ಎಂದು ಮಾಹಿತಿ ನೀಡಲಾಗಿರುವ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬಿಎಂಟಿಎಫ್, ಬೆಂಗಳೂರು ಇವರದಿನಾಂಕ: 29.04.2013 ರ ಪತ್ರದ ಕಡೆ ಈ ನ್ಯಾಯಾಲಯದ ಗಮನವನ್ನು ಸೆಳೆದರು.

13. ಬೆಂಗಳೂರು ಮಹಾನಗರ ಕಾರ್ಯಪಡೆ ಯ ಸದರಿ ಅಧಿಕಾರವನ್ನು ವಿಸ್ತರಣೆಗೊಳಿಸಿರುವ ಸಂಬಂಧದಲ್ಲಿ

ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರದ ಪ್ರಾಸಿಕ್ಯೂಟರ್ ರವರು ಸಹ ಸ್ಪಷ್ಟಪಡಿಸಿಲ್ಲ.ಈ ದೃಷ್ಟಿಯಿಂದ ಇಡೀ ಸಾಕ್ಷ್ಯಧಾರವನ್ನು ಪರಿಶೀಲಿಸಿದರೆ, ಒಪ್ಪಿಕೊಂಡಿರುವಂತೆ,ದಿನಾಂಕ: 18.04.2013 ರಂದು ದೂರನ್ನು ದಾಖಲಿಸಲಾಗಿತ್ತು.ಬಿಎಂಟಿಎಫ್ ಅಧಿಕಾರವುದಿನಾಂಕ: 18.3.2013 ರಂದು ಮುಕ್ತಾಯವಾಗಿರುತ್ತದೆ.ಇಂಥ ಸಂದರ್ಭಗಳಲ್ಲಿ, ಯಾವುದೇ ಅಧಿಕೃತತೆಯಿಲ್ಲದೆ, ದೂರನ್ನು ದಾಖಲಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.ಈ ಹಿನ್ನೆಲೆಯಲ್ಲಿ, ಈ ಸಂಬಂಧದಲ್ಲಿ ಸಲ್ಲಿಸಿದ ದೂರು ವಜಾಗೊಳ್ಳಲು ಯೋಗ್ಯವಾಗಿದೆ ಎಂದು ಮಾನ್ಯ ಹಿರಿಯ ನ್ಯಾಯವಾದಿಗಳು ಮಂಡಿಸಿದ ವಾದದಲ್ಲಿ ಹುರುಳಿರುವಂತೆ ತೋರುತ್ತದೆ.

14.ದಿನಾಂಕ: 03.04.2013 ರಂದು ವಿಲೆಯಾದ ರಿಟ್ ಅರ್ಜಿ ಸಂ .12556/2013 ರಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ತೀರ್ಪಿನಿಂದ ಕ ಂ ಡುಬರುವಂತೆಯೂ ಸಹ, ಅವರು ಬೆಂಗಳೂರು ಮಹಾನಗರ ಕಾರ್ಯಪಡೆಯನ್ನು ರದ್ದುಗೊಳಿಸಿಲ್ಲ ಮತ್ತು ಸದ್ಯಕ್ಕೆ ರದ್ದುಗೊಳಿಸುವ ಪ್ರಸ್ತಾವನೆಯೂ ಇಲ್ಲ ಎಂಬುದಾಗಿ ಮಾನ್ಯ ಹೆಚ್ಚುವರಿ ಅಡ್ವಕೇಟ್ ಜನರಲ್ ಮಾಡುತ್ತಿರುವ ಹೇಳಿಕೆಯು ಪರಿಗಣನೆಗೆ ಉಳಿಯದಿದ್ದರಿಂದ ಸದರಿ ರಿಟ್ ಅರ್ಜಿಯನ್ನು ವಿಲೆ ಮಾಡಬೇಕಾಗಿ ಬಂತು. ಈ ನ್ಯಾಯಾಲಯದ ವಿಭಾಗೀಯ ಪೀಠ ಮೇಲೆ ಹೇಳಿದ ರಿಟ್ ಅರ್ಜಿಯ ಸಂಬಂಧದಲ್ಲಿ ಹೊರಡಿಸಿದ ಆದೇಶವನ್ನು ಈ ಮುಂದಿನಂತೆ ಓದಲಾಗಿದೆ:

*1. ಮಾನ್ಯ ಹೆಚ್ಚುವರಿ ಅಡ್ವಕೇಟ್ ಜನರಲ್ ಆದ ಸಾಜನ್ ಪೂವಯ್ಯ ಅವರು ಸರ್ಕಾರದ ಪರವಾಗಿ ಬೆಂಗಳೂರು ಮಹಾನಗರ ಕಾರ್ಯಪಡೆಯನ್ನು ರದ್ದುಗೊಳಿಸಿಲ್ಲ ಅಥವಾ ಸದ್ಯಕ್ಕೆ ರದ್ದುಗೊಳಿಸುವ ಪ್ರಸ್ತಾವನೆಗಳು ಇರುವುದಿಲ್ಲ ಎಂದು ಹೇಳಿಕೆ ನೀಡಿದ ಮೇಲೆ, ಒಪ್ಪಲಾದಂತೆ, ಅರ್ಜಿಯು ಹೆಚ್ಚಿನ ಕಾಲ

ಪರಿಗಣನೆಗೆ ಉಳಿಯುವುದಿಲ್ಲ.ತದನುಸಾರವಾಗಿ ಅರ್ಜಿಯನ್ನು ವಿಲೇ ಮಾಡಲಾಗಿರುತ್ತದೆ.ಆದಾಗ್ಯೂ, ರಾಜ್ಯ ಸರ್ಕಾರದ ಪರವಾಗಿ ಅಭಿಲೇಖಿಸಲಾದ ಇದರಲ್ಲಿನ ಮೇಲ್ಕಂಡ ಹೇಳಿಕೆಯ ಕಾರ್ಯಪಡೆಯ ಸ ಂ ರಚನೆಯನ್ನು ಬದಲಾಯಿಸುವುದರಿಂದ ಸಂಬಂಧಪಟ್ಟ ಪ್ರಾಧಿಕಾರಿಗಳನ್ನು ಪ್ರತಿವಾದಿಸುವುದಿಲ್ಲ.

15. ಮೇಲಿನ ಆದೇಶದಿಂದ ಕಂಡುಬರುವಂತೆ ಮಹಾನಗರ ಕಾರ್ಯಪಡೆಯು ಮುಂದುವರೆಯುತ್ತಿದೆ ಮತ್ತು

ಕಾರ್ಯನಿರ್ವಹಿಸುತ್ತಿದೆ ಎಂಬುದಾಗಿ ಕರ್ನಾಟಕ ಸರ್ಕಾರವು ನೀಡಿದ ವಚನಬದ್ಧದ ಆಧಾರದ ಮೇಲೆ , ಸರ್ಕಾರದ ಯಾವುದೇ ನಿರ್ದಿಷ್ಟ ಅಧಿಸೂಚನೆಯಿಲ್ಲದ ಸರ್ಕಾರ ಸ್ಪಷ್ಟ ಆದೇಶದ ದೃಷ್ಟಿಯಿಂದ ಬೆಂಗಳೂರು ಮಹಾನಗರ ಕಾರ್ಯಪಡೆ ತನ್ನ ಅಧಿಕಾರವನ್ನು ಚಲಾಯಿಸುವುದಕ್ಕೆ ಅಧಿಕೃತ ಅಧಿಕಾರವನ್ನು ಹೊಂದಿದೆಯೆಂದು ಭಾವಿಸುವಂತಿಲ್ಲ ಮತ್ತು ಅಂಥ ಆ ಯಾವುದೇ ಅಧಿಸೂಚನೆಯೂ ಅಗತ್ಯ ಇರುವುದಿಲ್ಲ ಎಂಬುದಾಗಿ ಮಾನ್ಯ ಉಚ್ಚ ನ್ಯಾಯಾಲಯದ ಚ ಸರ್ಕಾರಿ ಪ್ರಾಸಿಕ್ಯೂಟರ್‌ವರು ಮಾಡಿಕೊಂಡ ನಿವೇದನೆಯನ್ನು ಸಹ

(ಒತ್ತು ನೀಡಲಾಗಿದೆ)

9. ಆದ್ದರಿಂದ,ದಿನಾಂಕ: 18.03.2013 ರಂದು ಬೆಂಗಳೂರು ಮಹಾನಗರ ಕಾರ್ಯಪಡೆಯ ಅಧಿಕಾರಾವಧಿ ಮುಕ್ತಾಯವಾಗಿದೆ ಎಂಬುದನ್ನು ಗಮನಿಸುವುದು ಸೂಕ್ತ, ಬೆಂಗಳೂರು ಮಹಾನಗರ ಕಾರ್ಯಪಡೆಯ ಅಧಿಕಾರಾವಧಿಯನ್ನು ವಾಸ್ತವವಾಗಿ ವಿಸ್ತರಿಸಿರುವುದನ್ನು ತೋರಿಸುವುದಕ್ಕೆ ಈ ವ್ಯವಹರಣೆಗಳಲ್ಲಿ ಈ ನ್ಯಾಯಾಲಯದ ಮುಂದೆ ಯಾವುದೇ ಸಾಕ್ಷ್ಯಾಧಾರ ಮಂಡಿಸಿರುವುದಿಲ್ಲ.ಆದಾಗ್ಯೂ, ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ರಾಸಿಕ್ಯೂಟರ್ ಅವರು, ಬೆಂಗಳೂರು ಚ ಮಹಾನಗರ ಕಾರ್ಯಪಡೆಯ ಅಧಿಕಾರ ಮತ್ತು ಅಧಿಕಾರವ್ಯಾಪ್ತಿಗೆ ಸಂಬಂಧಿಸಿದ ವಿಷಯವು ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿದೆ ಚ ಎಂದು ನಿವೇದಿಸಿರುವರು.

10. ದೂರಿನಲ್ಲಿ ಆರೋಪಿಸಲಾದ ಅಪರಾಧಗಳಿಗೆ ಸಂಬಂಧಪಟ್ಟ ಮಟ್ಟಿಗೆ, ಒಟ್ಟಾರೆಯಾಗಿ ಹಂಚಿಕೆದಾರನಿಗೆ ಪ್ರಶ್ನಿತ ಜಮೀನು ಮಂಜೂರಾಗಿರುವ ಮಾಹಿತಿ ದೂರುದಾರನಿಗೆ ತಿಳಿದಿತ್ತೆಂದು ದೂರಿನಲ್ಲಿ ಹೇಳಲಾಗಿದೆ.ಕರ್ನಾಟಕ ಭೂ ಕಂದಾಯ ಅಧಿನಿಯಮದ 192 ( ಎ), 192 (ಬಿ) ಪ್ರಕರಣಗಳ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 218, 166, 420 ನೇ ಪ್ರಕರಣಗಳ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ ಬೆಂಗಳೂರು ಮಹಾನಗರ ಕಾರ್ಯಪಡೆ ಪೊಲೀಸ್ ಠಾಣೆಯಲ್ಲಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಲಾಗಿದೆ.

11. ಕರ್ನಾಟಕ ಭೂ ಕಂದಾಯ ಅಧಿನಿಯಮದ 192 (ಎ) ಮತ್ತು 192 (ಬಿ) ಪ್ರಕರಣಗಳು ಈ ಮುಂದಿನಂತೆ ಓದಿಕೊಳ್ಳುವುದು:

" 192 ಎ.-ಅಪರಾಧಗಳು ಮತ್ತು ದಂಡನೆಗಳು.- ಈ ಅಧಿನಿಯಮ ಮತ್ತು ಅದರ ಅಡಿಯಲ್ಲಿ ರಚಿತವಾದ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಕೆಳಗಿನ ಕೋಷ್ಮಕದ ( 2) ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಪರಾಧಗಳನ್ನು ಯಾರು ಎಸಗುತ್ತಾರೋ ಅವರಿಗೆ ಕೋಷ್ಟಕದಲ್ಲಿನ ( 3) ನೇ ಅಂಕಣದಲ್ಲಿ ಸೂಚಿಸಲಾದ ಶಿಕ್ಷೆಯೊಂದಿಗೆ ದಂಡನೀಯವಾಗುವ ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರು ನ್ಯಾಯ ನಿರ್ಣಯಿಸತಕ್ಕದ್ದು.

| **ಕ್ರಮ ಸಂಖ್ಯೆ** | **ಅಪರಾಧ** | **ಶಿಕೆ 3** |
|---|---|---|
| ( 1 ) | ( 2 ) | ( 3 ) |
| 1 . | ಸರ್ಕಾರಿ ಜಮೀನಿನನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶದೊಂದಿಗೆ ಯಾವುದೇ ಸರ್ಕಾರಿ ಜಮೀನಿಗೆ ಅಕ್ರಮವಾಗಿ ಪ್ರವೇಶ ಮಾಡುವುದು ಅಥವಾ ಅತಿಕ್ರಮಿಸುವುದು . ಪರಂತು , ಕೊಡಗು ಜಿಲ್ಲೆಯಲ್ಲಿ ಜಮ್ಮಾ , ಬಾಣೆ ಜಮೀನುಗಳ ಸಂದರ್ಭದಲ್ಲಿ ಅಥವಾ ಸಕ್ರಮಗೊಂಡ | ಒಂದು ವರ್ಷದ ಸೆರೆವಾಸ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆ . |

| | | |
|---|---|---|
| | ಒತ್ತುವರಿಯಾದ ಸರ್ಕಾರಿ ಜಮೀನಿನ ಸಂದರ್ಭದಲ್ಲಿ ಅಥವಾ ಅಧಿನಿಯಮದ 94 - ಎ , 94 - ಬಿ ಮತ್ತು 94 - ಸಿ ಪ್ರಕರಣಗಳ ಅಡಿಯಲ್ಲಿ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಇತ್ಯರ್ಥದಲ್ಲಿರುವ ಜಮೀನುಗಳ ಸಂದರ್ಭದಲ್ಲಿ ಇದು ಅನ್ವಯವಾಗತಕ್ಕದ್ದಲ್ಲ . | |
| | | 2 . |
| ಯಾವುದೇ ಸರ್ಕಾರಿ ಜಮೀನಿನನ್ನು ಮಾರಾಟ ಮಾಡುವ , ಅಡಮಾನ ಮಾಡುವ ಅಥವಾ ದಾನದ ಮೂಲಕ ಹಸ್ತಾಂತರ ಮಾಡುವ ಅಥವಾ ಅನ್ಯಥಾ ರೀತಿಯಲ್ಲಿ ಅತಿಕ್ರಮಿಸುವ ಉದ್ದೇಶಕ್ಕಾಗಿ ನಕಲು ದಸ್ತಾವೇಜುಗಳನ್ನು ಸೃಜನೆ ಮಾಡುವ ಮೂಲಕ ಮೋಸ ವಂಚನೆ ಮಾಡುವುದು . | ಮೂರು ವರ್ಷಗಳ ಸೆರೆವಾಸ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ . | 3 . |
| ಸರ್ಕಾರಿ ಜಮೀನನ್ನು ಕಬಳಿಸುವ ಉದ್ದೇಶದಿಂದ ಅಥವಾ ಅತಿಕ್ರಮಣ ಮಾಡುವ ಉದ್ದೇಶದಿಂದ ಅಂಥ ಜಮೀನುಗಳ ಸಂಬಂಧದಲ್ಲಿ ನಕಲಿ ದಸ್ತಾವೇಜುಗಳನ್ನು ಸೃಜಿಸುವುದು . | ಮೂರು ವರ್ಷಗಳ ಸೆರೆವಾಸ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆ . | ಕೋಷ್ಟಕ |
| **( 1 )** | **( 2 )** | **( 3 )** |
| 4 . | ಸರ್ಕಾರಿ ಜಮೀನನ್ನು ಅಕ್ರಮವಾಗಿ ಅತಿಕ್ರಮಿಸುವ ಬಗ್ಗೆ ವರದಿಯನ್ನು ಮಾಡಲು ಅಥವಾ ಅಂಥ ಅಕ್ರಮ ಅತಿಕ್ರಮಣವನ್ನು ತಡೆಯಲು ಕ್ರಮಗಳನ್ನು ಕೈಗೊಳ್ಳಲು ನಿಯೋಜಿಸಲಾದ ಅಧಿಕಾರಿಯು ವರದಿ ಮಾಡಲು ಅಥವಾ ಕ್ರಮಗಳನ್ನು ತೆಗೆದುಕೊಳ್ಳಲು ವಿಫಲನಾಗುವುದು . ಪರಂತು , | ಮೂರು ವರ್ಷಗಳ ಸೆರೆವಾಸ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ . |

| | | |
|---|---|---|
| | ಕೊಡಗು ಜಿಲ್ಲೆಯಲ್ಲಿ ಜಮ್ಮಾ , ಬಾಣೆ ಜಮೀನುಗಳ ಸಂದರ್ಭಗಳಲ್ಲಿ ಅಥವಾ ಸಕ್ರಮಗೊಂಡಿರುವ ಅತಿಕ್ರಮಣ ಸರ್ಕಾರಿ ಭೂಮಿಗಳ ಸಂದರ್ಭದಲ್ಲಿ ಅಥವಾ ಅಧಿನಿಯಮದ 94 - ಎ , 94 - ಬಿ ಮತ್ತು 94-8 ಪ್ರಕರಣದ ಅಡಿಯಲ್ಲಿ ರಚಿತವಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಇತ್ಯರ್ಥದಲ್ಲಿರುವ ಜಮೀನುಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ . | |
| | 5 . | ಕೃಷಿ ಭೂಮಿಯನ್ನು ಪರಿವರ್ತಿಸದೆ ಅಥವಾ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದುಕೊಳ್ಳದೆ ಕೃಷಿಯೇತರ ಉದ್ದೇಶಕ್ಕಾಗಿ ಮಾರಾಟ ಮಾಡುವುದು . ಪರಂತು , ಸಂಬಂಧದಲ್ಲಿ ವಿಶೇಷ ಯೋಜನೆಯನ್ನು ರೂಪಿಸುವ ಮೂಲಕ ಸರ್ಕಾರವು ಸಕ್ರಮಗೊಳಿಸಿದ ಜಮೀನುಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ . |
| ಮೂರು ವರ್ಷಗಳ ಸೆರೆವಾಸ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ | 6 . | ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಲು ಅಥವಾ ಕೃಷಿ ಭೂಮಿಧಾರಕನನ್ನು ಕೃಷಿಯೇತರ ಉದ್ದೇಶಕ್ಕೆ ಬಳಸಲು ಅಧಿಕೃತಗೊಳಿಸುವುದಕ್ಕೆ ಸಂಬಂಧಿಸಿದಂತೆ ನಕಲಿ ದಸ್ತಾವೇಜುಗಳನ್ನು ಸೃಜಿಸುವುದು . |
| ಒಂದು ವರ್ಷ ಸೆರೆವಾಸ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆ . | 7 . | ದಾಖಲೆಗಳನ್ನು ನಿರ್ವಹಿಸುವ ಹೊಣೆಗಾರಿಕೆಯನ್ನು ಹೊಂದಿರುವ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ಅಕ್ರಮ ಪರಿವರ್ತನೆಯ ಬಗ್ಗೆ ವರದಿ ಮಾಡುವ ಹೊಣೆಗಾರಿಕೆಯನ್ನು ಹೊಂದಿರುವ ಸರ್ಕಾರಿ ನೌಕರನು , ಸಕ್ಷಮ ಪ್ರಾಧಿಕರಕ್ಕೆ ವರದಿ ಮಾಡಲು |

| | | |
|---|---|---|
| | | ವಿಫಲನಾಗುವುದು ಅಥವಾ ಕೃಷಿಯೇತರ ಉದ್ದೇಶಕ್ಕಾಗಿ ಕಂದಾಯ ಭೂಮಿಯನ್ನು ಅಕ್ರಮವಾಗಿ ಪರಿವರ್ತನೆ ಮಾಡಿರುವ ವಿರುದ್ಧ ಕ್ರಮಗಳನ್ನು ಕೈಗೊಳ್ಳುವುದಕ್ಕೆ ವಿಫಲನಾಗುವುದು . |
| **( 1 )** | **( 2 )** | **( 3 )** |
| ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಕಾನೂನುಸಮ್ಮತ ಆದೇಶಗಳನ್ನು ಉಲ್ಲಂಘಿಸುವುದು . | ಮೊದಲ ಅಪರಾಧಕ್ಕಾಗಿ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಮತ್ತು ಮುಂದುವರೆದ ಅಪರಾಧಕ್ಕಾಗಿ ಜುಲ್ಮಾನೆಯ ಐದು ಪಟ್ಟು ಜುಲ್ಮಾನೆ . | 8 |

192-29.ಅಪರಾಧಗಳಿಗೆ ಪ್ರಚೋದನೆ.- ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧಗಳನ್ನು ಯಾರಾದರೂ ಪ್ರಚೋದನೆ ಮಾಡಿದರೆ ಅಥವಾ ಅಂಥ ಯಾವುದೇ ಅಪರಾಧ ಎಸಗುವುದಕ್ಕೆ ಪ್ರಯತ್ನಿಸಿದರೆ ಅಂಥ ಅಪರಾಧ ಎಸಗಿದ್ದಕ್ಕಾಗಿ ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಉಪಬಂಧಿಸಿದ ದಂಡನೆಯೊಂದಿಗೆ ಅವನು ಅ ದಂಡಿತನಾಗತಕ್ಕದ್ದು.

12. 1967 ನೇ ವರ್ಷದಲ್ಲಿ ರಾಜ್ಯ ಸರ್ಕಾರವು ಮೂಲ ಪ್ರತಿಗ್ರಾಹಿಯಾಗಿರುವ ಶ್ರೀ ಸೂರ್ಯನಾರಾಯಣ ರಾವ್ ಅವರಿಗೆ ಪ್ರಶ್ನಿತ ಜಮೀನನ್ನು ಮಂಜೂರು ಮಾಡಿತ್ತು.ಅವರು ತಮ್ಮ ಜೀವಿತಾವಧಿಯಲ್ಲಿ ಮಂಜೂರಾತಿಯ ಯಾವುದೇ ಸೌಲಭ್ಯಗಳ ಫಲ ಪಡೆಯಲು ಸಾಧ್ಯವಾಗದಿದ್ದರೂ, ಅವರ ವಾರಸುದಾರರು 1993 ರಿಂದ 2012 ರವರೆಗೆ ಜಮೀನು ಮಂಜೂರಾತಿಗಾಗಿ ಕಾನೂನು ಸಮರ ನಡೆಸಿದರು, ಈ ಕಾನೂನು ಸಮರದಲ್ಲಿ ಮೂರು ರಿಟ್ ಅರ್ಜಿಗಳು, ಒಂದು ರಿಟ್ ಅಪೀಲು ಮತ್ತು ಒಂದು ನ್ಯಾಯಾಂಗ ನಿಂದನೆ ಅರ್ಜಿಗಳು ಒಳಗೊಂಡಿರುತ್ತದೆ.ಉನ್ನತ ಮಟ್ಟದ ಕಾರ್ಯಕಾರಿ ಸಂಸ್ಥೆಯಾಗಿರುವ ರಾಜ್ಯ ಸಚಿವ ಸಂಪುಟವು ಜಮೀನಿನ ಹಂಚಿಕೆಗೆ ನಿರ್ಣಯ ತೆಗೆದುಕೊಂಡಿತ್ತು.ಅದು ಜಮೀನು ಮಂಜೂರಾತಿ ಆದೇಶದವರೆಗೂ ಫಲಕಾರಿಯಾಗಿತ್ತು.ಈ ಸಂದರ್ಭದಲ್ಲಿ ಸಂಪುಟದ ಇತರ ಸದಸ್ಯರ ಯಾವುದೇ ದುರುದ್ದೇಶಗಳನ್ನು ಹೊಂದಿದ್ದ ಬಗ್ಗೆ ಆರೋಪಿಸಿಲ್ಲ.ಆದುದರಿಂದ, ಮೊದಲ ಪ್ರತ್ಯರ್ಜಿದಾರನು ವದಂತಿಯ ಮಾಹಿತಿಯನ್ನಾಧರಿಸಿ ನೀಡಿದ ದೂರನ್ನು ಸಮರ್ಥಿಸಲು ಸಾಧ್ಯವಿಲ್ಲದಷ್ಟು ದುರ್ಬಲವಾಗಿದೆ.ಈ ಸಂದರ್ಭದಲ್ಲಿ, ಸದರಿ ದೂರಿಗೆ ಅನುಸಾರವಾಗಿ ವ್ಯವಹರಣೆಗಳನ್ನು ಮುಂದುವರೆಸಿದರೆ, ಅದು ಕಾನೂನಿನ ಪ್ರಕ್ರಿಯೆಯ ದುರುಪಯೋಗವಲ್ಲದೆ ಮತ್ತೇನು ಅಲ್ಲ.

13. ಮೊಕದ್ದಮೆಯ ಅಭಿಲೇಖಗಳನ್ನು ಮತ್ತು ದೂರನ್ನು ಜಾಗೂರೂಕತೆಯಿಂದ ಪರಾಮರ್ಶಿಸಿದಾಗ, ಕರ್ನಾಟಕ ಭೂ ಕಂದಾಯ ಅಧಿನಿಯಮದ 192 ( ಎ) ಪ್ರಕರಣದ ಅಡಿಯಲ್ಲಿ ಯಾವುದೇ ಅಪರಾಧವನ್ನು

ಮಾಡಿಲ್ಲ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ.ಹಾಗೆಯೇ 192 (ಬಿ) ನೇ ಪ್ರಕರಣವು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧಕ್ಕೆ ಕುಮ್ಮಕ್ಕು ನೀಡಿದರೆ, ಅದಕ್ಕೆ ನೀಡುವ ದಂಡನೆಗೆ ಸಂಬಂಧಿಸಿದ ಪ್ರಕರಣವಾಗಿದೆ.ಬೆಂಗಳೂರು ಮಹಾನಗರ ಕಾರ್ಯಪಡೆಯು ಅಧಿನಿಯಮದ 192 ( ಎ) ಪ್ರಕರಣದ ಅಡಿಯಲ್ಲಿ ಆರೋಪಗಳನ್ನು ಎಸಗಿದೆ ಎಂದು ಆರೋಪಿಸಲಾಗಿದೆ.192 ( ಎ) ಪ್ರಕರಣದ ಅಡಿಯಲ್ಲಿನ ಅಪರಾಧಗಳನ್ನು ಸ್ವಾಭಾವಿಕ ಉಪಸಿದ್ಧಾಂತವಾಗಿ ಗುರುತಿಸದಿರುವುದರಿಂದ, 192 (ಬಿ) ಪ್ರಕರಣವನ್ನು ಅನ್ವಯಿಸಲಾಗುವುದಿಲ್ಲವೆಂಬುದು ನನ್ನ ಪರಿಗಣಿತ ಅಭಿಪ್ರಾಯ.ಅದರಂತೆಯೇ, ಸಚಿವ ಸ ಂ ಪಟದ ನಿರ್ಣಯದ ಅನುಸಾರವಾಗಿಯೇ ಜಮೀನು ಮಂಜೂರಾಗಿರುವುದರಿಂದ, ಭಾರತ ದಂಡ ಸಂಹಿತೆಯ ಅಡಿಯಲ್ಲಿನ ಅಪರಾಧಗಳನ್ನು ಅನುಮೋದಿಸಲು ಸಾಧ್ಯವಾಗುವುದಿಲ್ಲ.

14. ಈ ಸಂದರ್ಭದಲ್ಲಿ, ಅರ್ಜಿಗಳ ಗುಣಾರ್ಹತೆಯನ್ನು ಪರಿಗಣಿಸಿ ಅವುಗಳನ್ನು ತದನುಸಾರವಾಗಿ ಪುರಸ್ಕರಿಸಲಾಗಿದೆ.ಪ್ರಸ್ತುತ ಮುಖ್ಯ ಮೆಟ್ರೋಪಾಲಿಟಿನ್ ಮ್ಯಾಜಿಸ್ಟ್ರೇಟ್, ಬೆಂಗಳೂರು ನಗರ ಇಲ್ಲಿ ಇತ್ಯರ್ಥದಲ್ಲಿರುವ ಬೆಂಗಳೂರು ಮಹಾನಗರ ಕಾರ್ಯಪಡೆ ಪೊಲೀಸ್ ಠಾಣೆಯಲ್ಲಿ ನೋಂದಣಿಯಾದ ಎಫ್ಐಆರ್ ಸಂ. 63/2014 ಕ್ಕೆ ಸಂಬಂಧಿಸಿದ ಎಲ್ಲ ವ್ಯವಹರಣೆಗಳನ್ನು ವಜಾಮಾಡಲಾಗಿದೆ.